**ಓ.ಎಸ್. ನಂ. 503/2015 ಪಿ.ಡಬ್ಲೂ-1 ಹೆಸರು - ಲಕ್ಷೀ**

**ಸಾಕ್ಷಿಯನ್ನು ದಿನಾಂಕಃ 27.01.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ ಎಂ ಕೆ ವಕೀಲರಿಂದಃ-**

ನಾನು ಈ ದಾವೆಯನ್ನು ಒಂದೂವರೆ ಎಕರೆಗೆ ಸಂಬಂಧಿಸಿದಂತೆ ಮತ್ತು ಒಂದು ಎಕರೆಗೆ ಸಂಬಂಧಿಸಿದಂತೆ ಸದರಿ ಸ್ವತ್ತುಗಳಲ್ಲಿ ನಮ್ಮ ಯಜಮಾನರಿಗೆ ಹಿಸ್ಸೆ ಬರಬೇಕೆಂದು ಕೋರಿ ಸಲ್ಲಿಸಿದೆ. ನನಗೆ ಓದಲು ಮತ್ತು ಬರೆಯಲು ಬಾರದ ಕಾರಣ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ ಎಂದರೆ ಸರಿ. ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ಬರೆದಿರುವ ಸಹಿ ನನ್ನದೋ ಅಲ್ಲವೋ ಎಂದು ಗೊತ್ತಿಲ್ಲ. ಸಾಕ್ಷ್ಯದ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ನಮ್ಮ ವಕೀಲರು ನನಗೆ ಹೇಳಿಲ್ಲ ಎಂದರೆ ಸಾಕ್ಷಿ ನನಗೆ ಈ ಕೇಸಿನ ಸ್ವತ್ತುಗಳಲ್ಲಿ ನಮ್ಮ ಯಜಮಾನರ ಭಾಗ ಬರಬೇಕೆಂದು ಅದನ್ನು ಬಿಟ್ಟು ಇತರೆ ವಿಚಾರ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗೆ ಅನುಕೂಲವಾಗುವ ರೀತಿಯಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

2. ಮಲಿನಾಯಕರವರು 1 ನೇ ಪ್ರತಿವಾದಿಯ ತಂದೆ ಎಂದರೆ ಸರಿ. ನನ್ನ ಪತಿಯ ತಂದೆಯ ಹೆಸರು ಮಲ್ಲಿಯನಾಯಕ ಎಂದರೆ ಸರಿ. ನನ್ನ ಯಜಮಾನರಿಗೆ ಚಿಕ್ಕನಾಯಕ ಎಂಬ ಮತ್ತೊಬ್ಬ ಸಹೋದರ ಇದ್ದು, ಚಿಕ್ಕಮ್ಮ ಎಂಬ ತಂಗಿ ಇದ್ದಾರೆ. ಈ ದಾವೆಯಲ್ಲಿ ಸದರಿ ಚಿಕ್ಕಮ್ಮರವರನ್ನು ಸೇರ್ಪಡೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂತಿಮ ಡಿಕ್ರಿ ಅರ್ಜಿ 6/2008 ರಲ್ಲಿ ಚಿಕ್ಕಮ್ಮರವರನ್ನು ಸೇರಿಸಿದ್ದು, ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಂತಿಮ ಡಿಕ್ರಿ ಅರ್ಜಿಯಲ್ಲಿ ಮನೆಯನ್ನು ಸೇರ್ಪಡೆ ಮಾಡಿದ್ದು, ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

3. ಸಾಕ್ಷಿಗೆ ಕಳಲೆ ಗ್ರಾಮದ ಸರ್ವೆ ನಂಬರ್ 240, 255/3, 262/3, 263/3 ಮತ್ತು 5/2 ರ ಪಹಣಿಗಳಂತೆ ನಿಮ್ಮ ಯಜಮಾನರ ಹೆಸರಿನಲ್ಲಿ ಖಾತೆ ಇದ್ದು, ಅದರಂತೆ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಅಂತೆಯೇ ಹೊಸಕೋಟೆ ಮಸಗೆ ಗ್ರಾಮದ ಸರ್ವೆ ನಂಬರ್ 35/1 ರ ಖಾತೆ ನಿಮ್ಮ ಯಜಮಾನರ ಹೆಸರಿನಲ್ಲಿದ್ದು ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ತೋರಿಸಲಾದ ಪಹಣಿಗಳನ್ನು ನಿಡಿ 1 ರಿಂದ 6 ಎಂದು ಗುರುತಿಸಲಾಯಿತು. ಈಗಾಗಲೇ ವಿಭಾಗ ಮಾಡಿಕೊಂಡಿದ್ದು, ಪುನಃ ಭಾಗ ಬೇಕು ಎಂದು ದಾವೆ ಸಲ್ಲಿಸಿದ್ದೀರ ಎಂದರೆ ಸಾಕ್ಷಿ ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ಹಾಗಾಗಿ ಈ ಸ್ವತ್ತುಗಳ ಕುರಿತಾಗಿ ದಾವೆ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ.

4. ಅಂತೆಯೇ ಹೊಸಕೋಟೆ ಮಸಗೆ ಗ್ರಾಮಕ್ಕೆ ಸಂಬಂಧಿಸಿದ ಸರ್ವೆ ನಂಬರ್ 264/2, 170, 32/1, 33/1 ರ ಸ್ವತ್ತುಗಳು 1ನೇ ವಾದಿಯಾದ ಚಿಕ್ಕನಾಯಕರವರಿಗೆ ಸೇರಿದ್ದು, ಸದರಿರವರು ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿ. ಕಳಲೆ ಗ್ರಾಮದ ಸರ್ವೆ ನಂಬರ್ 239 ರ ಸ್ವತ್ತು ನನ್ನ ಮಾವನವರ ಹೆಸರಿನಲ್ಲಿದ್ದು, ಸದರಿ ಸ್ವತ್ತು 1 ನೇ ವಾದಿಯ ಸ್ವಾಧೀನತೆಯಲ್ಲಿದೆ ಎಂದರೆ ಸರಿ. ಸಾಕ್ಷಿಗೆ ತೋರಿಸಲಾದ ಪಹಣಿಗಳನ್ನು ನಿಡಿ 7 ರಿಂದ 12 ಎಂದು ಗುರುತಿಸಲಾಯಿತು.

**(ನ್ಯಾಯಾಲಯದ ಕಲಾಪದ ಅವಧಿ ಮುಗಿದ ಕಾರಣ ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು)**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**